ಕರ್ನಾಟಕ ವಿಧಾನಸಭೆ

ಒಂಭತ್ತನೆಯ ವಿಧಾನಸಭೆ

(ಒಂಭತ್ತನೆಯ ಅಧಿವೇಶನ)

ಕರ್ನಾಟಕ ಮಾನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ (ತಿದ್ದುಪಡಿ)

ವಿಧೇಯಕ, 1993

(1993ರ ವಿಧಾನಸಭಾ ವಿಧೇಯಕ ಸಂಖ್ಯೆ - 7)

ಕರ್ನಾಟಕ ಮಾನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ ಅಧಿನಿಯಮ 1986ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಮಾನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ ಅಧಿನಿಯಮ, 1988 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ 15)ನ್ನು ತಿದ್ದುಪಡಿ.ಮಾಡುವುದು ಯುಕ್ತವಾಗಿರುವುದರಿಂದ :

ಭಾರತ ಗಣರಾಜ್ಯದ ನಲವತ್ತಾಲ್ಕನೇ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ . -

1. **ಚಿಕ್ಕ ಹೆಸರು ಮತ್ತು ಪ್ರಾರಂಭ** : - (1) ಈ ಅಧಿನಿಯಮವನ್ನು ಕರ್ನಾಟಕ ಮಾನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 1993 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕುದ್ದು.

2. **2ನೇ ಪ್ರಕರಣದ ತಿದ್ದುಪಡಿ** :- ಕರ್ನಾಟಕ ಮಾನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ ಅಧಿನಿಯಮ, 1986 (1990ರ ಕರ್ನಾಟಕ ಅಧಿನಿಯಮ 15) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿತವಾದ) ರ 2ನೇ ಪ್ರಕರಣದಲ್ಲಿ (ಡಿ) ಖಂಡದಲ್ಲಿ, ' ರಾಜ್ಯ ಸರ್ಕಾರವು ' ಎಂಬ ಪದಗಳಿಗೆ ' ಬಂದರುಗಳ ಅಧಿನಿಯಮ 1908 (1908ರ ಕೇಂದ್ರಾಧಿನಿಯಮ 15)ರ 3ನೇ ಪ್ರಕರಣದ (8) ನೇ ಖಂಡದಲ್ಲಿ ಪಾರಿಭಾಷಿಸಲಾದ ಇತರೆ ಮುಖ್ಯ ಬಂದರುಗಳ ಪರಿಮಿತಿಯಲ್ಲಿ ಬರುವ ಪ್ರದೇಶವನ್ನು ಹೊರತುಪಡಿಸಿ ರಾಜ್ಯ ಸರ್ಕಾರವು ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕುದು.

3. **4ನೇ ಪ್ರಕರಣದ ತಿದ್ದುಪಡಿ** : ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ (ಎಲ್) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ -
'(ಎಲ್ ಎ) ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತನಾದ ನೌಕಾದಳದ ಒಬ್ಬ ಪ್ರತಿನಿಧಿ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಮಾನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ಅಧಿನಿಯಮ, 1986ಕ್ಕೆ ಅನುಮತಿಯನ್ನು ನೀಡುವಾಗ್ಗೆ, ಭಾರತ ಸರ್ಕಾರದವರು ಕೆಳಕಂಡಂತೆ ತಿದ್ದುಪಡಿಯನ್ನು ಮಾಡಬೇಕೆಂದು ಕೋರಿದ್ದಾರೆ:-

1) ರಾಜ್ಯದ ಯಾವುದಾದರೂ ದೊಡ್ಡ ಬಂದರಿನ ನಿಯಂತ್ರಣವನ್ನು ಕರ್ನಾಟಕ ಮಾನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ 1986 ಈ ಅಧಿನಿಯಮ ವ್ಯಾಪ್ತಿಯಿಂದ ಹೊರತುಪಡಿಸುವುದು; ಮತ್ತು

2) ಕರ್ನಾಟಕ ಮಾನುಗಾರಿಕೆ, ಬಂದರು ಸರಹದ್ದುಗಳು ಪ್ರಾಧಿಕಾರ 1986ರ 4ನೇ ಕಲಮಿನಡಿಯಲ್ಲಿ ರಚಿಸುವ ಬಂದರು ಸರಹದ್ದುಗಳ ಪ್ರಾಧಿಕಾರದಲ್ಲಿ ನೌಕಾಪಡೆಯ ಒಬ್ಬ ಪ್ರತಿನಿಧಿಯನ್ನು ಸೇರಿಸುವುದು.

ಆದ್ದರಿಂದ ಈ ವಿಧೇಯಕ.

ಅನುಬಂಧ

ಕರ್ನಾಟಕ ಮಾನುಗಾರಿಕೆ ಬಂದರು ಸರಹದ್ದು ಪ್ರಾಧಿಕಾರ ಅಧಿನಿಯಮ, 1986 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ 15) ಇದರ ಉದ್ಧೃತ ಭಾಗ.

XX XX XX

2. **ಪರಿಭಾಷೆಗಳು** : ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.

ಎ) XX XX XX

ಬಿ) XX XX XX

ಸಿ) XX XX XX

ಡಿ) ಮಾನುಗಾರಿಕೆ ಬಂದರು ಸರಹದ್ದು ಎಂದರೆ, ರಾಜ್ಯ ಸರ್ಕಾರವು ಮಾನುಗಾರಿಕೆ ಬಂದರು ಸರಹದ್ದು ಪ್ರದೇಶವೆಂದು ಅಧಿಸೂಚಿಸಬಹುದಾದಂಥ ಯಾವುದೇ ಪ್ರದೇಶ.

XX XX XX

4. **ಪ್ರಾಧಿಕಾರದ ರಚನೆ** :- ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು.

ಎ) XX XX XX

ಬಿ) XX XX XX

ಸಿ) XX XX XX

ಡಿ) XX XX XX

ಇ) XX XX XX

ಎಫ್) XX XX XX

ಜಿ)	XX	XX	XX
ಹೆಚ್)	XX	XX	XX
ಐ)	XX	XX	XX
ಜೆ)	XX	XX	XX
ಕೆ)	XX	XX	XX

ಎಲ್) ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ಬೆಸ್ತ ಮಹಿಳೆಯರ ಸಹಕಾರಿ ಸಂಘದ ಒಬ್ಬ ಪ್ರತಿನಿಧಿ.

ಎಮ್)	XX	XX	XX
	XXX	XXX	XXX